ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಉಪವಿಭಾಗ-1ರ ಕಛೇರಿ
ಚಾವಿಸನಿನಿ,ಕೆ.ಆರ್.ಪೇಟೆ- 571426
Telephone No: 9448994910

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Subdivision-1 Office,
CESC, K R Pet-571426
Web Site:cescmysore.karnataka.gov.in
E-mail ID:aeekrpet1@cescmysore.org

**Company Identity Number[CIN]:- U40109KA2004SGC035177**

ಕ್ರಮಾಂಕ:ಸಕಾನಿಇಂ(ವಿ)/ಸಇಂ(ತಾಂ)/2021-22/ 1436 ದಿನಾಂಕ: 15/9/21

# ಸಭಾ ನಡುವಳಿ

**ವಿಷಯ: ದಿನಾಂಕ 13.09.2021 ನೇ ದಿನಾಂಕದಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ಕೆ.ಆರ್.ಪೇಟೆ ಉಪವಿಭಾಗ-1ರಲ್ಲಿ 2ನೇ ಜನ ಸಂಪರ್ಕ ಸಭೆ ನಡೆಸಲಾಯಿತು. ಸಮಯ: 11:00**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1) ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಸೆಸ್ಕ್, ಕೆ.ಆರ್.ಪೇಟೆ ವಿಭಾಗ
2) ಲೆಕ್ಕಾಧಿಕಾರಿಗಳು, ಸೆಸ್ಕ್, ಕೆ.ಆರ್.ಪೇಟೆ ವಿಭಾಗ
3) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೆ.ಆರ್.ಪೇಟೆ ಉಪವಿಭಾಗ-1
4) ಅಕ್ಕಿಹೆಬ್ಬಾಳು ಶಾಖಾಧಿಕಾರಿ.
5) ಶೀಳನೆರೆ ಶಾಖಾಧಿಕಾರಿ.
6) ವಿಠಲಾಪುರ ಶಾಖಾಧಿಕಾರಿ.
7) ಬೂಕನಕೆರೆ ಶಾಖಾಧಿಕಾರಿ.

**ಚರ್ಚಾ ವಿಷಯಗಳು:**

| ಸಭೆಗೆ ಹಾಜರಿದ್ದ ಗ್ರಾಹಕರಿಂದ ಪಡೆದ ದೂರುಗಳು | ಸಂಬಂಧ ಪಟ್ಟ ಅಧಿಕಾರಿ/ಶಾಖೆ | ದೂರುಗಳಿಗೆ ಸ್ಥಳದಲ್ಲೆ ನೀಡಿದ ಉತ್ತರಗಳು ಮತ್ತು ಸೂಚನೆಗಳು |
|---|---|---|
| 1.ಶ್ರೀ.ತಮ್ಮಣ್ಣ ಕರೋಟಿ : ಕುಂದನಹಳ್ಳಿ ಕೆರೆಯಲ್ಲಿ ಹಾದು ಹೋಗಿರುವ ಲೈನ್ ತುಂಬಾ ಶಿದಿಲಗೊಂಡಿದ್ದು ಈ ಕಾಮಗಾರಿ ಇನ್ನು ಮುಗಿದಿಲ್ಲ ಎಂದು ಆರೋಪಿಸಿದರು. | ವಿಠಲಾಪುರ ಶಾಖೆ | ಸದರಿ ಕಾಮಗಾರಿಯು ಪ್ರಗತಿಯಲ್ಲಿರುವುದಾಗಿ ತಿಳಿಸಿ ತುರ್ತಾಗಿ ಪೂರ್ಣಗೊಳಿಸಲು ವಿಠಲಪುರ ಶಾಖಾಧಿಕಾರಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರು ತಿಳಿಸಿದರು. |
| 2. ಶ್ರೀ.ಚೇತನ್ ಹೆಗ್ಗಡಹಳ್ಳಿ : ಹೆಗ್ಗಡಹಳ್ಳಿ ಗ್ರಾಮದಲ್ಲಿ ಪರಿವರ್ತಕ ಅಳವಡಿಕೆ ನಂತರ ಗ್ರಾಮದ ಹಲವು ಮನೆಗಳಲ್ಲಿ ವಿದ್ಯುತ್ ಗೃಹ ಉಪಕರಣಗಳು ಸುಟ್ಟಿರುತ್ತದೆ ಎಂದು ಆರೋಪಿಸಿದರು. | ವಿಠಲಾಪುರ ಶಾಖೆ | ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ಉಪವಿಭಾಗ-1 ರವರು ಮಾತನಾಡಿ ಪರಿವರ್ತಕ ಅಳವಡಿಕೆ ಕಾಮಗಾರಿಯ ಸಂಧರ್ಭದಲ್ಲಿ ತಾಂತ್ರಿಕ ಲೋಪವಾಗಿದ್ದಲ್ಲಿ ಹೈ.ವೋಲ್ಟೇಜ್ ನಿಂದ ಸದರಿ ಅವಘಡ ಸಂಭವಿಸಿರಬಹುದು. ಸದರಿ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರಿಗೆ ಎಚ್ಚರಿಕೆ ನೀಡುವುದಾಗಿ ತಿಳಿಸಿದರು. |

| | | |
|---|---|---|
| 3. **ಶ್ರೀ. ಕುಮಾರ್ ನಗರೂರು** : ಬೀದಿ ದೀಪಗಳಿಗೆ ಕಂಟ್ರೋಲ್ ವೈರ್ ಆಳವಡಿಸುವ ಕಾಮಗಾರಿಯ ಪ್ರಗತಿಯ ಬಗ್ಗೆ ತಿಳಿಸುವಂತೆ ಕೋರಿದರು. ಮತ್ತು ಜನ ಸಂಪರ್ಕ ಸಭೆಗೆ ಆಧೀಕ್ಷಕ ಇಂಜಿನಿಯರ್ ರವರನ್ನು ಕರೆಸುವಂತೆ ತಿಳಿಸಿದರು. | ಶೀಳನೆರೆ | ಬೀದಿ ದೀಪಗಳಿಗೆ ಕಂಟ್ರೋಲ್ ವೈರ್ ಅಳವಡಿಸುವ ಕಾಮಗಾರಿಯ ವೆಚ್ಚ ಭರಿಸಲು ಸ್ಥಳೀಯ ಪ್ರಾಧೀಕಾರಗಳಿಗೆ ನಿಗಮ ಕಛೇರಿಯಿಂದ ಪತ್ರ ಬರೆದಿರುವುದಾಗಿ ತಿಳಿಸಿ ಜನಸಂಪರ್ಕ ಸಭೆಗೆ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಬಹುದಾಗಿ ಮಾನ್ಯ ಕೆ.ಇ.ಆರ್.ಸಿ ರವರ ನಿರ್ದೇಶನವಿರುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತಿಳಿಸಿದರು. |
| 4.**ಶ್ರೀ. ಮುದ್ದುಕುಮಾರ್ ಸಿಂಧಘಟ್ಟ** : ಬೋರಲಿಂಗೇಗೌಡ, ಕಾಳೇಗೌಡ ಸಿಂಧಘಟ್ಟ ಗ್ರಾಮ ಅವರ ಅಧಿಕೃತ ಕೊಳವೆ ಬಾವಿಗೆ ವೋಲ್ಟೇಜ್ ಸಾಲುತ್ತಿಲ್ಲ ಸದರಿಯವರ ಬಾವಿಗೆ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕ್ರಮ ತೆಗೆದುಕೊಳ್ಳಲು ಕೋರಿದರು. | ಶೀಳನೆರೆ | ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ಉಪವಿಭಾಗ-1 ರವರು ಶೀಳನೆರೆ ಶಾಖಾಧೀಕಾರಿಯವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ತಿಳಿಸಿದರು. |

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್.ಕಾ ಮತ್ತು ಪಾ ಗ್ರಾಮಾಂತರ ಉಪವಿಭಾಗ
ಕೆ.ಆರ್.ಪೇಟೆ- 1